ದಿನಾಂಕ ಃ 09-06-2017 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಶ್ರೀ ಎಮ್‌ಎಚ್‌ಕೆ ವಕೀಲರಿಂದ ಃ

ನಮ್ಮ ತಂದೆ 2 ವರ್ಷಗಳಿಂದ ಪಾರ್ಶ್ವವಾಯು ರೋಗದಿಂದ ಬಳಲುತ್ತಿದ್ದಾರೆ. ನಿರ್ದಿಷ್ಟವಾಗಿ ಯಾವ ತಿಂಗಳಿನಿಂದ ಪಾರ್ಶ್ವವಾಯು ರೋಗದಿಂದ ಬಳಲುತ್ತಿದ್ದಾರೆ ಎಂದು ಹೇಳಲು ಆಗುವುದಿಲ್ಲ. ನಮ್ಮ ತಂದೆಗೆ ಪಾರ್ಶ್ವರೋಗ ಆಗಿರುವುದಿಲ್ಲ ಅಂದರೆ, ಹಾಗೂ ಆ ರೀತಿ ಅವರು ರೋಗದಿಂದ ಬಳಲುತ್ತಿದ್ದಾರೆ ಎಂದು ನಾನು ಆಸ್ತಿ ಕಬಳಿಸಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ ನುಡಿದರೆ ವಾಸ್ತವಿಕತೆ ಹೊರ ಹೊಮ್ಮುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ನಮ್ಮ ಮತ್ತು ವಾದಿಯರ ಘರಾಣೆದ ಮೂಲ ಪುರುಷ ರಾಮಪ್ಪ ಲಮಾಣಿ ಅಂದರೆ ಸರಿ. ಸದರಿ ರಾಮಪ್ಪ ಲಮಾಣಿ ಇವರಿಗೆ 1. ಬಾಬಣ್ಣ 2. ಸೋಮಣ್ಣ 3. ಗೇಮಪ್ಪ 4. ಪೀರಪ್ಪ ಎನ್ನುವ 4 ಜನ ಗಂಡು ಮಕ್ಕಳು ಅಂದರೆ ಸರಿ. ಬಾಬಣ್ಣನಿಗೆ ಲಚ್ಚಪ್ಪ ಎನ್ನುವ ಮಗ ಇದ್ದ ಅಂದರೆ ಸರಿ. ಸದರಿ ಲಚ್ಚಪ್ಪನಿಗೆ ಕಮಲವ್ವ ಎನ್ನುವವಳು ಹೆಂಡತಿ ಅಂದರೆ ಸರಿ. ಸದರಿ ಲಚ್ಚಪ್ಪ ಮತ್ತು ಕಮಲವ್ವ ಇವರಿಗೆ ರಾಮಪ್ಪ ಮತ್ತು ಶಂಕ್ರಪ್ಪ ಎನ್ನುವವರು ಮಕ್ಕಳು ಇರುತ್ತಾರೆ ಅಂದರೆ ಸರಿ. ಸೋಮಣ್ಣನಿಗೆ ನೇಮಪ್ಪ ಮತ್ತು ಗೋಪಣ್ಣ ಎನ್ನುವವರು ಇಬ್ಬರು ಗಂಡು ಮಕ್ಕಳು ಅಂದರೆ ಸರಿ. ನೇಮಪ್ಪನಿಗೆ ರಾಮಪ್ಪ ಮತ್ತು ಹನುಮಂತಪ್ಪ ಎನ್ನುವವರು ಇಬ್ಬರು ಗಂಡು ಮಕ್ಕಳು ಅಂದರೆ ಸರಿ. ಗೋಪಣ್ಣನಿಗೆ ಹನುಮಂತ, ಭೀಮಪ್ಪ, ಶಂಕ್ರಪ್ಪ, ರಾಮಪ್ಪ, ನಾಗಪ್ಪ, ನಿಂಗಪ್ಪ, ಸೋಮವ್ವ ಎನ್ನುವವರು ಮಕ್ಕಳು ಅಂದರೆ ಸರಿ. ಪೀರಪ್ಪನಿಗೆ ಲಚಮವ್ವ ಎನ್ನುವವರು ಹೆಂಡತಿ ಅಂದರೆ ಸರಿ. ಪೀರಪ್ಪ ಮತ್ತು ಲಚಮವ್ವ ಇವರಿಗೆ ಚಿಕ್ಕಪ್ಪ, ದ್ಯಾಮಪ್ಪ, ದೇವಪ್ಪ, ಈರಪ್ಪ, ಗೀರವ್ವ ಎನ್ನುವವರು ಮಕ್ಕಳು ಅಂದರೆ ಸದರಿಯವರ ಪೈಕಿ ದ್ಯಾಮಪ್ಪ ಎನ್ನುವವರು ಪೀರಪ್ಪ ಮತ್ತು ಲಚಮವ್ವ ಇವರ ಮಗ ಇರುವುದಿಲ್ಲ ಎಂದು ಹೇಳಿರುತ್ತಾರೆ. ಚಿಕ್ಕಪ್ಪನಿಗೆ ಸುಬ್ಬಪ್ಪ ಮತ್ತು ಮಲ್ಲಪ್ಪ ಎನ್ನುವವರು ಮಕ್ಕಳು ಅಂದರೆ ಸರಿ.

ದ್ಯಾಮಪ್ಪ ಎನ್ನುವವನಿಗೆ ಕೇಶವ ಎನ್ನುವವರು ಹೆಂಡತಿ ಅಂದರೆ ಸರಿ. ಕೇಶವ ಮತ್ತು ದ್ಯಾಮಪ್ಪ ಇವರಿಗೆ ಹೇಮವ್ವ, ಪಾರವ್ವ, ನೀಲವ್ವ, ಶಾರದಾ, ಲಲಿತವ್ವ, ಶಂಕ್ರಪ್ಪ ಮತ್ತು ಪುಟ್ಟಪ್ಪ ಎನ್ನುವವರು ಮಕ್ಕಳು ಅಂದರೆ ಸರಿ. ಸದರಿ ದ್ಯಾಮಪ್ಪ, ಶಂಕ್ರಪ್ಪ ಮತ್ತು ಪುಟ್ಟಪ್ಪ ಎನ್ನುವವರು ಈ ದಾವೆಯ 1 ರಿಂದ 3 ನೇ ಪ್ರತಿವಾದಿಯರು ಅಂದರೆ ಸರಿ. ನಾನು 3 ನೇ ಪ್ರತಿವಾದಿ ಅಂದರೆ ಸರಿ.

ಸನ್ 1987 ರಲ್ಲಿ ಲಚ್ಚಪ್ಪ ತಂದೆ ಬಾಬಣ್ಣ ಲಮಾಣಿ ಇವರು ತನ್ನ ಚಿಕ್ಕಪ್ಪ ಮತ್ತು ಚಿಕ್ಕಪ್ಪನ ಮಕ್ಕಳ ನಡುವೆ ತಮ್ಮ ಏಕತ್ರ ಘರಾಣೆ ಆಸ್ತಿಗಳ ಸಂಬಂಧವಾಗಿ ವಾಟ್ನಿ ಮಾಡಿಕೊಂಡಿದ್ದಾರೆ ಅಂದರೆ ಸರಿ. ಸದರಿ ವಾಟ್ನಿಗೆ ಸಂಬಂಧವಾಗಿ ಕಲ್ಲೇದೇವರು ಗ್ರಾಮದ ಡ ನಂ 4390 ಮಂಜೂರು ಆಗಿರುತ್ತದೆ ಅಂದರೆ ಸರಿ. ಸದರಿ ಡ ನಿಪಿ 15 ಎಂದರೆ ಸರಿ. ನಿಪಿ 15 ರ ಸಂಗತಿಗಳು ಸುಳ್ಳು ಇರುತ್ತವೆ. ವಾದಿಯರು ಹಾಜರು ಪಡಿಸಿದ ನಿಪಿ 1 ರಿಂದ 12 ರವರೆಗಿನ ಉತಾರೆಗಳನ್ನು ನಾನು ನೋಡಿಲ್ಲ. ಸದರಿ ಉತಾರೆಗಳಲ್ಲಿ ದೇಮಪ್ಪ ಉರ್ಫ್ ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ ಎಂದು ನಮೂದು ಇರುತ್ತದೆ ಅಂದರೆ ಸುಳ್ಳು. ವಕೀಲರು ಸಾಕ್ಷಿಗೆ ನಿಮ್ಮ ಊರಿನಲ್ಲಿ ದೇಮಪ್ಪ ಉರ್ಫ್ ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ ಎನ್ನುವ ವ್ಯಕ್ತಿ ಇರುತ್ತಾರೆಯೋ ಇಲ್ಲವೋ ಎಂದು ಪ್ರಶ್ನಿಸಿದಾಗ ಇಲ್ಲವೆಂದು ಉತ್ತರಿಸಿದ್ದಾರೆ. ಆ ಹೆಸರಿನ ವ್ಯಕ್ತಿ ನಮ್ಮ ತಂದೆ ಹಾಗೂ 1 ನೇ ಪ್ರತಿವಾದಿ ಅಂದರೆ ಸುಳ್ಳು. ದಾವಾದ ಆಸ್ತಿಯನ್ನು ಕಬಳಿಸಲು ಆ ಹೆಸರಿನ ವ್ಯಕ್ತಿ ನಮ್ಮ ತಂದೆ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಲಚಮಣ್ಣ ತಂದೆ ಬಾಬಣ್ಣ ಲಮಾಣಿ, ಸೋಮವ್ವ ಕೋ ದ್ಯಾಮಪ್ಪ ಲಮಾಣಿ, ಭೀಮಪ್ಪ ತಂದೆ ಗೋಪೆಪ್ಪ ಲಮಾಣಿ, ರಾಮಪ್ಪ ತಂದೆ ಗೋಪೆಪ್ಪ ಲಮಾಣಿ, ಶಂಕ್ರಪ್ಪ ತಂದೆ ಗೋಪೆಪ್ಪ ಲಮಣಿ, ನಾಗಪ್ಪ ತಂದೆ ಗೋಪೆಪ್ಪ ಲಮಾಣಿ, ನಿಂಗಪ್ಪ ತಂದೆ ಗೋಪೆಪ್ಪ ಲಮಾಣಿ, ದೇಮಪ್ಪ ತಂದೆ ಪೀರಪ್ಪ ಲಮಾಣಿ, ದೇವಪ್ಪ ತಂದೆ ಪೀರಪ್ಪ ಲಮಾಣಿ, ಸುಬ್ಬಪ್ಪ ತಂದೆ ಪೀರಪ್ಪ ಲಮಾಣಿ, ಮಲ್ಲಪ್ಪ ತಂದೆ ಚಿಕ್ಕಪ್ಪ ಲಮಾಣಿ, ಗೇಮಪ್ಪ ತಂದೆ ರಾಮಪ್ಪ ಲಮಾಣಿ ಇವರೆಲ್ಲರೂ ಸೇರಿಕೊಂಡು ಸೇವಾನಗರ ಗ್ರಾಮದ ಸರ್ವೇ ನಂ 137/2 ನೇದ್ದಕ್ಕೆ ಸಂಬಂಧಪಟ್ಟಂತೆ ಸನ್ 2012-13 ನೇ ಇಸ್ವಿಯಲ್ಲಿ ಹಕ್ಕು ಬಿಡುಗಡೆ ಪತ್ರ ಮಾಡಿಕೊಂಡ ಮೇರೆಗೆ ಹಕ್ಕು ಬದಲಾವಣೆ ಆಗಿರುತ್ತದೆ

ಅಂದರೆ ಸರಿ, ಸಾಕ್ಷಿ ಸ್ವಇಚ್ಛೆಯಿಂದ ಸುಬ್ಬಪ್ಪ ತಂದೆ ಚಿಕ್ಕಪ್ಪ ಲಮಾಣಿ ಎನ್ನುವ ಹೆಸರು ಸರಿ ಇರುತ್ತದೆ, ಅದು ಸುಬ್ಬಪ್ಪ ತಂದೆ ಪೀರಪ್ಪ ಲಮಾಣಿ ಎನ್ನುವುದು ತಪ್ಪು ಇರುತ್ತದೆ.

ದಾವಾದ ಆಸ್ತಿಗಳಲ್ಲಿ ನಾವು ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದೇವೆ ಎಂದು ಸುಳ್ಳು ಸಂಗತಿಗಳನ್ನು ಪ್ರತಿವಾದ ಪತ್ರದಲ್ಲಿ ನಮೂದಿಸಿ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ, ದಾವಾದ ಆಸ್ತಿಯು ನಮ್ಮ ಅಜ್ಜನ ಆಸ್ತಿ ಇದ್ದುದರಿಂದ ಹಾಗೂ ಅದು ನಮ್ಮ ತಂದೆಗೆ ಬಂದಿದ್ದರಿಂದ ಹಾಗೂ ನಂತರ ನಮಗೆ ಬಂದಿದ್ದರಿಂದ ನಾವು ಅದರಲ್ಲಿ ಸ್ವಾಧೀನ ಹೊಂದಿದ್ದೇವೆ. ದಾವಾದ ಆಸ್ತಿಯಲ್ಲಿ ವಾರ್ಸಾ ನಾತೆಯಿಂದಾಗಲಿ ಅಥವಾ ಬೇರೆ ಯಾವುದೇ ರೀತಿಯಿಂದಾಗಲಿ ನಮ್ಮ ಕಬ್ಜಾ ಇರುವುದಿಲ್ಲ ಅಂದರೆ ಸುಳ್ಳು. ನಮ್ಮ ತಂದೆ ಸನ್ 2005 ರಲ್ಲಿ ದಾವಾ 1 ನೇ ಆಸ್ತಿ ಸರ್ವೇ ನಂ 139/1ಡ ಮತ್ತು 2 ನೇ ಆಸ್ತಿ 145/4ಅ ಗಳ ಬಗ್ಗೆ ತನ್ನ ಹೆಸರಿಗೆ ಹಕ್ಕು ಬದಲಾವಣಿ ಮಾಡಲು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿದ್ದನು ಅಂದರೆ ಸರಿ. ನಮ್ಮ ತಂದೆ ಸದರಿ ವರದಿಯನ್ನು ಮೃತ್ಯುಪತ್ರದ ಆಧಾರದಲ್ಲಿ ಹಕ್ಕು ಬದಲಾವಣೆ ಮಾಡಲು ಕೊಟ್ಟಿದ್ದರು ಅಂದರೆ ಸರಿ. ನಮ್ಮ ತಂದೆ ಮೃತ್ಯುಪತ್ರದ ಮೇರೆಗೆ ನೀಡಿದ ವರದಿಯ ಪ್ರಕಾರ ಎಂ ಆರ್ 22 ಆಗಿರುತ್ತದೆ ಅಂದರೆ ಸಾಕ್ಷಿ ತಮಗೆ ಓದಲು ಬರುವುದಿಲ್ಲವಾದ್ದರಿಂದ ಅದು ಗೊತ್ತಾಗುವುದಿಲ್ಲ ಎಂದು ಹೇಳಿರುತ್ತಾರೆ.

ಸನ್ 2005 ನೇ ಇಸ್ವಿಯಲ್ಲಿ ಸುಬ್ಬಪ್ಪ ತಂದೆ ಪೀರಪ್ಪ ಲಮಾಣಿ, ಮಲ್ಲಪ್ಪ ತಂದೆ ಚಿಕ್ಕಪ್ಪ ಲಮಾಣಿ, ದೇವಪ್ಪ ತಂದೆ ಪೀರಪ್ಪ ಲಮಾಣಿ, ದ್ಯಾಮಪ್ಪ ತಂದೆ ಪೀರಪ್ಪ ಲಮಾಣಿ, ಈರಪ್ಪ ತಂದೆ ಪೀರಪ್ಪ ಲಮಾಣಿ ಇವರೆಲ್ಲರೂ ಸೇರಿಕೊಂಡು ಸೇವಾನಗರ ಗ್ರಾಮದ ಸರ್ವೇ ನಂ 139/1ಕ, 145/3 ನೇದ್ದರ ಆಸ್ತಿಗಳ ಕುರಿತು ಆಪಸಾತ್ ವಾಟ್ನಿ ಮಾಡಿಕೊಂಡು ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಅಂದರೆ ನಿಜ. ಸಾಕ್ಷಿ ಸ್ವಇಚ್ಛೆಯಿಂದ ಸದರಿ ವ್ಯವಹರಣೆಯಲ್ಲಿ ದ್ಯಾಮಪ್ಪ ಇರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ಈ ಮೇಲೆ ಹೇಳಿದ ವ್ಯಕ್ತಿಗಳು ನೀಡಿದ ವರದಿಯ ಮೇರೆಗೆ ಎಂ ಆರ್ ನಂ 23/2004-05 ನಮೂದಾಗಿ ಮಂಜೂರು ಆಗಿರುತ್ತದೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರು ಕಾಲಾವಕಾಶ ಕೇಳಿದ ಮೇರೆಗೆ ಪ್ರಕರಣವನ್ನು ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ. ನ್ಯಾಯಾಲಯ, ಬ್ಯಾಡಗಿ.